# ಸಾಧನ–ಸಾಧ್ಯ

ನಾವು ಎಲ್ಲಿಗಾದರೂ ಹೋಗಬೇಕಾದರೆ ಸಾಧನಗಳನ್ನು ಬಳಸುತ್ತೇವೆ. ಆ ಸಾಧನಗಳು ಬೈಕು, ಸ್ಕೂಟರ್, ಕಾರು, ಬಸ್ಸು, ರೈಲು ಇವು ಯಾವುದಾದರೂ ಆಗಬಹುದು. ಇವುಗಳನ್ನು ಲೌಕಿಕಾರ್ಥದಲ್ಲಿ 'ಸಾಧನ'ಗಳೆಂದೇ ಕರೆಯುತ್ತೇವೆ. ಈ ಮಾತನ್ನು ತತ್ತ್ವದ ನೆಲೆಗೂ ಅನ್ವಯ ಮಾಡಿಕೊಳ್ಳಬಹುದು. ಬಸ್ಸು–ರೈಲು ಹಿಡಿದು ಯಾವುದೋ ಒಂದು ಗಂತವ್ಯವನ್ನು ನಾವು ಸೇರುತ್ತೇವೆ. ನಾವು ಅದನ್ನು 'ಸಾಧ್ಯ' ಎಂದು ಕರೆಯುತ್ತೇವೆ. ಜೀವನದ ಪುರುಷಾರ್ಥವನ್ನು ಕುರಿತು ಚಿಂತಿಸಿದ ಪೂರ್ವಿಕರು ಸ್ವರ್ಗ, ಮೋಕ್ಷ, ಪ್ರಾಪ್ತಿ ಎಂದೆಲ್ಲಾ ಕರೆದುಕೊಂಡರಷ್ಟೆ. ಇವೆಲ್ಲವೂ 'ಸಾಧ್ಯ' ಎಂಬ ಪರಿಕಲ್ಪನೆಯ ನೆಲೆಯಲ್ಲಿ ಬಂದುವು. ನಮ್ಮ ಸಾಧನಗಳು ಬಲು ಮುಖ್ಯ. ನಿಶ್ಚಿತವಾದ ಗಂತವ್ಯವನ್ನು ತಲುಪಲು ಸರಿಯಾದ ಸಾಧನಗಳನ್ನು ನಾವು ಆಯ್ದುಕೊಳ್ಳಬೇಕು. 'ಸಾಧನ' ಎಂಬುದನ್ನು ಇಂಗ್ಲಿಷಿನಲ್ಲಿ 'ಟೂಲ್ಸ್' ಎಂದು ಸ್ಥೂಲವಾಗಿ ಕರೆಯಬಹುದು. ಅದನ್ನು ಲೌಕಿಕದ ವ್ಯಾವಹಾರಿಕ ಪರಿಭಾಷೆಯಲ್ಲಿ 'ಉಪಕರಣ' ಎಂದು ಕರೆಯುತ್ತೇವೆ. ಉತ್ತಮ ಉಪಕರಣಗಳು ಉತ್ತಮವಾದ ಫಲಿತಾಂಶವನ್ನು ನೀಡುತ್ತವೆ. ನಾವು ಕೆಲವು ಉದಾಹರಣೆಗಳ ಮೂಲಕ ಈ ಸಂಗತಿಯನ್ನು ವಿವರಿಸಿಕೊಳ್ಳೋಣ. ಈ ಮಾತನ್ನು ವ್ಯಕ್ತಿ, ಕುಟುಂಬ, ಸಮುದಾಯ, ಸಮಾಜದವರೆಗೂ ವಿಸ್ತರಿಸಬಹುದು. ಇದು 'ಕ್ರಿಯೆ'ಯನ್ನು ಅವಲಂಬಿಸಿರುತ್ತದೆ. ನಮ್ಮ ಕ್ರಿಯಾಭಾವ ಚೆನ್ನಾಗಿದ್ದರೆ ಫಲಿತಾಂಶವೂ ಉತ್ತಮವಾಗಿರುತ್ತದೆ. ಶ್ರೇಷ್ಠ ಗುರು ಸಿಕ್ಕರೆ, ಶಿಷ್ಯನೂ ಗಂತವ್ಯವನ್ನು ತಲುಪಬಹುದು. ಅವನು ಸಿದ್ಧಿ ಪಡೆಯಬಲ್ಲನು. ಶ್ರೀರಾಮಕೃಷ್ಣ ಪರಮಹಂಸರನ್ನೂ ವಿವೇಕಾನಂದರನ್ನೂ ನಾವು ಈ ಹಿನ್ನೆಲೆಯಲ್ಲಿ ನೆನೆಯಬಹುದು.

ಸಾಧನಗಳ ಬಗೆಗೆ ನಮ್ಮ ಪೂರ್ವಿಕರು ಬಲು ಶ್ರದ್ಧೆಯನ್ನು ತೋರಿಸುತ್ತಿದ್ದರು. ಗೃಹೋಪಯೋಗಿ ಸಾಧನಗಳಿರಬಹುದು; ವ್ಯವಸಾಯಕ್ಕೆ ಬಳಸುವ ಸಾಧನಗಳಾಗಿರಬಹುದು; ಜ್ಞಾನಕ್ಕೆ ಸಂಬಂಧಿಸಿದ ಸಾಧನಗಳಾಗಿರಬಹುದು. ಇಲ್ಲೆಲ್ಲಾ ಉತ್ತಮ ಸಾಧನ ಸಲಕರಣೆಗಳು ಫಲಿತಾಂಶದ ಉತ್ತಮತ್ವಕ್ಕೆ ಕಾರಣವಾಗುತ್ತಿದ್ದವು. ಇಂಥ ಸಾಧನಗಳು ಶ್ರದ್ಧೆಯಿಂದ ತಯಾರಾಗುತ್ತಿದ್ದವು. ಅವು ನೂರ್ಕಾಲ ಉಳಿಯಬೇಕೆಂಬ ಹಂಬಲ ಕೌಶಲ್ಯಜ್ಞರಲ್ಲಿ ಇರುತ್ತಿತ್ತು. ಪ್ರತಿಯೊಂದು ಸಾಧನಗಳ ಹಿಂದೆ ಪರಿಶ್ರಮ, ಕೌಶಲ್ಯ, ಶ್ರದ್ಧೆಗಳು ತುಂಬಿರುತ್ತಿದ್ದವು! ಹೀಗೆ ಬಂದು, ಹಾಗೆ ಹೋಗುವ ಸಾಧನಗಳನ್ನು ಅವರು ಮಾಡುತ್ತಿರಲಿಲ್ಲ. ಇದು ಲೌಕಿಕಕ್ಕೆ ಸಂಬಂಧಿಸಿದ ಸಂಗತಿಯಾಗಿರುವಂತೆ; ಅಲೌಕಿಕಕ್ಕೆ ಸಂಬಂಧಿಸಿದ ಸಂಗತಿಗಳಿಗೂ ಅನ್ವಯವಾಗುತ್ತಿತ್ತು. ಸಾಧನಗಳ ಬಳಕೆಯ ಹಿಂದೆ, ಶ್ರದ್ಧೆ, ನಂಬಿಕೆಗಳು ದೃಢವಾಗಿರುತ್ತಿದ್ದವು. 'ಶ್ರದ್ಧಾವಾನ್ ಲಭತೇ ಜ್ಞಾನಂ' ಎಂಬ ಮಾತಿನ ಹಿಂದೆ ನೂರಾರು ವರ್ಷಗಳ ಅನುಭವರೂಪೀ ಜನ್ಯಕ್ರಿಯೆ ಇರುತ್ತಿದ್ದುದನ್ನು ನಾವು ಮರೆಯುವಂತಿಲ್ಲ.

ಸಾಧನ–ಸಾಧ್ಯಗಳು ಒಂದಕ್ಕೊಂದು ಅವಲಂಬಿಗಳೇ. ಇವು ಸಾಪೇಕ್ಷತೆಯನ್ನು ಹೊಂದಿವೆ. ನಮ್ಮ ಬಾಳ್ವೆ ಎಂಬ ವಿಶ್ವದಲ್ಲಿ ಉತ್ತಮ ಸಾಧನಗಳಿವೆ; ಅಡ್ಡ ಪರಿಣಾಮ ತೋರಿಸುವ ಸಾಧನಗಳೂ ಉಂಟು. ಇವುಗಳನ್ನು ವಿಚಾರವಿಮರ್ಶೆಯಿಂದ ಮಾತ್ರ ತಿಳಿಯಲು ನಮಗೆ ಸಾಧ್ಯ. ಪುರಂದರದಾಸರು ತಮ್ಮೆಲ್ಲ ಐಶ್ವರ್ಯವನ್ನು ಕೊಟ್ಟು ಶ್ರೀಹರಿಯ ಕೃಪೆಗೆ ಪಾತ್ರರಾದಾಗ 'ಸಾಧನ ಸಂಪತ್ತಾಯಿತು' ಎಂದು ಹೇಳಿದರು. 'ಸಾಧನ' ಸಂಪತ್ತಾಗುವುದು ಯಾವಾಗೆಂದರೆ, ಇದು ತನ್ನದಲ್ಲ ಎಂಬ ಭಾವವು ಮುಕ್ತವಾದಾಗ. ಗೃಹಸ್ಥನಾಗಲಿ, ಸಾಧಕನಾಗಲಿ, ಅಧಿಕಾರಿಯಾಗಲಿ 'ಸಾಧನ'ವೇ ಸಾಧ್ಯವೆಂದು ತಿಳಿಯಬಾರದು. ಇದು ಕೇವಲ ಉಪಕರಣ ಎಂಬ ಭಾವ ಅವರಲ್ಲಿ ತುಂಬಿರಬೇಕು. ಗೀತೆಯಲ್ಲಿ 'ಕರ್ತವ್ಯ ಮಾತ್ರ ನನ್ನದು, ಫಲಾಫಲಗಳು ನನ್ನದಲ್ಲ' ಎಂದು ಹೇಳಲಾಗಿದೆಯಷ್ಟೆ. ಇದು ಒಂದು ರೀತಿಯಲ್ಲಿ ಸಾಧನಗಳ ವ್ಯಾಮೋಹಿಯಾಗದೆ ಇರುವುದರ ಕಡೆ ನಮ್ಮ ಗಮನವನ್ನು ಸೆಳೆಯುತ್ತದೆ.

ನಾವೀಗ ಸಾಧನಗಳನ್ನೇ ಜೀವನದ ಆತ್ಯಂತಿಕ ಸತ್ಯಗಳೆಂದು ತಿಳಿಯುತ್ತಿದ್ದೇವೆ. ನಾವು ಸಾಧ್ಯ ಅಥವ ಪರಮಗಂತವ್ಯವನ್ನು ಮರೆತು ಕುಳಿತಿದ್ದೇವೆ. ಶಿಷ್ಯನೊಬ್ಬ ಗುರುವನ್ನು ಆಶ್ರಯಿಸುತ್ತ, ಕೊನೆಗೆ ತಾನು ಮುಟ್ಟಬೇಕಾದ ಗುರಿಯನ್ನು ಮರೆತು ಕುಳಿತುಕೊಳ್ಳುವ ಪರಿಸ್ಥಿತಿಯಂತಾಗಿದೆ ನಮ್ಮ ಈಗಿನ ಸ್ಥಿತಿ. ಇದು ನಮ್ಮ ಸಾಧನಗಳ ಪರಿ! ಈ ಮಾತು ಲೌಕಿಕವಾಗಿಯೂ ಸತ್ಯ; ಆಗಮಿಕವಾಗಿಯೂ ಸತ್ಯ. ನಾವು ಲೋಕಸತ್ತೆಯನ್ನು ತಿಳಿಯದೆ ಪಾರಮಾರ್ಥಿಕ ಸತ್ತೆಯನ್ನು ತಿಳಿಯುವುದು ಎಂದೂ ಅಸಾಧ್ಯ! ಲೋಕಸತ್ತೆಯು ಸಾಧನವಾದರೆ; ಪಾರಮಾರ್ಥಿಕ ಸತ್ತೆಯು ಸಾಧ್ಯ ಎನಿಸಿಕೊಳ್ಳುತ್ತದೆ. ನಾವು ಬಳಸುವ ಪುಸ್ತಕ ಕೇವಲ ಸಾಧನವೆಂಬುದನ್ನು ತಿಳಿಯಬೇಕು. ಆ ಪುಸ್ತಕವು ಕೇವಲ ಕಾಗದ ಎಂಬುದು ಲೋಕಸತ್ಯವಾದರೂ ಅದರಿಂದ ದೊರಕುವ ಅನುಭವಜನ್ಯ ಜ್ಞಾನದ ಸಾಧನಗಳು ದೊರಕಿದಾಗ ಅದರಿಂದ ನಮಗೆ ಮುಕ್ತರಾಗಲು ಸಾಧ್ಯವಾಗುತ್ತದೆ. ಈ ಮಾತನ್ನು ನಮ್ಮ ಸಾಮಾನ್ಯ ಜೀವನದಿಂದಲೂ ವಿವರಿಸಿಕೊಳ್ಳಬಹುದು. ನಾವೊಂದು ಮನೆಯನ್ನು ಲಕ್ಷಾಂತರ ಹಣ ಹಾಕಿ ಕಟ್ಟಿಕೊಳ್ಳುತ್ತೇವೆ. ಅದರಲ್ಲಿ ವಾಸ ಮಾಡುತ್ತೇವೆ. ಆದರೆ, ಅದಷ್ಟೆ ಅಂತಿಮಸತ್ಯವೆಂದು ತಿಳಿಯಬಾರದು. ಕನಕದಾಸರು ಹೇಳಿದಂತೆ 'ಇಲ್ಲಿರುವುದು ಸುಮ್ಮನೆ, ಅಲ್ಲಿರುವುದು ನಮ್ಮನೆ' ಎಂಬ ಎಚ್ಚರವೂ ಇರಬೇಕು. ಆಗ ಸಾಧ್ಯ ಅಥವ ಗುರಿಯ ಮರ್ಮ ತಿಳಿದಂತಾಗುತ್ತದೆ. 'ಬಯಲು ಆಲಯದೊಳಗೊ ಆಲಯವು ಬಯಲೊಳಗೊ' ಎಂದು ಮಾರ್ಮಿಕವಾಗಿ ಕನಕದಾಸರು ಪ್ರಶ್ನಿಸಿದ್ದುಂಟು. ಇದು ಒಗಟಿನ ಪರಿಯಾದರೂ ಸಾಧನ–ಸಾಧ್ಯಗಳ ನಡುವಣ ಸಂಬಂಧದ ಪ್ರಶ್ನೆಯನ್ನು ಇದು ಎತ್ತುತ್ತದೆ.

ಆಧುನಿಕ ಬದುಕು, ಸಾಧನಗಳ ಹೇರಾಶಿಯಲ್ಲಿ ಹೂತುಹೋಗಿದೆ. ಇಲ್ಲಿ ಗೊತ್ತುಗುರಿಗಳಿಲ್ಲದೆ ನಾವು ಅಲೆಯುತ್ತಿದ್ದೇವೆ. ಪ್ರತಿಯೊಂದು ಸಂಗತಿಗೂ ಗುರಿಯುಂಟು. ಆದರೆ, ಗುರಿಗಳಿಲ್ಲದ ಬದುಕು ನಮ್ಮದಾಗಿದೆ. ಸಾಧನಗಳು ಮೌಲ್ಯಗಳನ್ನು ಪ್ರತಿನಿಧಿಸಬೇಕಷ್ಟೆ. ಆದರೆ, ಇಂದು ಮೌಲ್ಯಗಳಿಲ್ಲದ ಬದುಕು ನಮ್ಮದಾಗಿದೆ. ಹೀಗಾಗಿ, ಸಾಧನಗಳ ಹಾಜರಿ ಇದ್ದರೂ ಮೌಲ್ಯಗಳ ಗೈರುಹಾಜರಿಯಿಂದ ಸಾಧ್ಯತೆಗಳು ಇಲ್ಲವಾಗಿವೆ. ಇಲ್ಲಿ ಒಂದು 'ಸಾಧನ' ಎಂಬುದಿಲ್ಲ. ಹಲವು ಸಾಧನಗಳು ಉಂಟು; ಸಾಧ್ಯಗಳೂ ಹಲವುಂಟು. ಆದರೆ, ಸಾಧನಗಳು ಇದ್ದೂ ಇಲ್ಲವಾಗಿರುವ ಆತಂಕಕ್ಕೆ ನಾವು ಒಳಗಾಗಿಬಿಟ್ಟಿದ್ದೇವೆ. ಇದರಿಂದ ನಾವು ಪಾರಾಗುವುದು ಹೇಗೆ? ಈ ಪ್ರಶ್ನೆಯ ಮೂಲಕ ಸಾಧ್ಯತೆಗಳ ಕಡೆ ನಾವು ಹೆಜ್ಜೆ ಹಾಕೋಣ!

■ **ಪುರಂಜೀವಿ**

## ಮಾತೇ ಮುತ್ತು

- ಅಂಜಿದರೆ ಅಮರುವುದು ಮಂಜು, ಅಂಜಿಕೆ ಮಂಜು, ದಿಟ್ಟತನ ದಾರಿ ಪಂಜು.
  —ಕೆ.ಎಸ್. ನರಸಿಂಹಸ್ವಾಮಿ
- ಸಾವ್ರಜನಕ್ಕೆ ಸಾವ್ರ ದೇವ್ರು, ಬಡತನ ದೇವ್ರು ಒಬ್ನೆ.
  —ಜಿ.ಪಿ. ರಾಜರತ್ನಂ
- ಸತಿಯಿಂದಲೇ ಪತಿಯ ಉದ್ಧಾರವಾಗುವುದು.
  —ವಿ.ಕೃ. ಗೋಕಾಕ್
- ಸಹನೆಯೇ ಒಳಿತುಗಳಿಗೆ ಮೂಲ ಕಾರಣ.
  —ಮಹಾವೀರ
- ನಿಲ್ವೊಡೆ ಗುಣಂ ನಿಲ್ಕುಂ ಪಣ ನಿಲ್ಕುಮೇ.
  —ರನ್ನ
- ಪ್ರೀತಿಯ ಭಾಷೆಯನ್ನು ಮೃಗಗಳೂ ಅರ್ಥ ಮಾಡಿಕೊಳ್ಳುತ್ತವೆ.
  —ವಿನೋಬಾ ಭಾವೆ
- ಎಲ್ಲಕ್ಕಿಂತ ಶ್ರೇಷ್ಠ ಸತ್ಯ. ಆದರೆ ಪ್ರಾಮಾಣಿಕ ಜೀವನವು ಅದಕ್ಕಿಂತಲೂ ಮಿಗಿಲಾದದ್ದು.
  —ಗುರುನಾನಕ್
- ಬರಿಯ ಸಾಧನೆಗಳಿಂದಲೇ ಎಲ್ಲವೂ ಆಗುತ್ತದೆಂದು ತಿಳಿಯಬಾರದು.
  —ಕುವೆಂಪು
- ಅರಿತು ಮಾಡಿದ್ದು ಪಾಪ, ಮರೆತು ಮಾಡಿದ್ದು ಮನುಷ್ಯ ಸ್ವಭಾವ.
  —ತರಾಸು
- ದೀನರೂ ದುಃಖಿಗಳೂ ದೇವರಲ್ಲವೆ? ಮೊದಲು ಅವರನ್ನು ಏಕೆ ಪೂಜಿಸಬಾರದು?
  —ಸ್ವಾಮಿ ವಿವೇಕಾನಂದ